**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಪಿ.ಆರ್. ರಮೇಶ್, ಶ್ರೀ ಸಲೀಂ ಅಹ್ಮದ್, ಶ್ರೀ ಯು.ಬಿ. ವೆಂಕಟೇಶ್, ಶ್ರೀ ಎಂ. ನಾಗರಾಜು, ಶ್ರೀ ಟಿ.ಎ. ಶರವಣ, ಶ್ರೀ ಅಬ್ದುಲ್ ಜಬ್ಬಾರ್, ಶ್ರೀ ಪ್ರಕಾಶ್ ಕೆ. ರಾಥೋಡ್ ಹಾಗೂ ಶ್ರೀ ಬಿ.ಕೆ. ಹರಿಪ್ರಸಾದ್ ರವರು ರವರು ನಿಯಮ 72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ.**

ವಿಷಯ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಒಟ್ಟು ಐದು ಸಾವಿರ ಮೆಟ್ರಿಕ್ ಟನ್ ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ ಮತ್ತು ವಿಲೇವಾರಿಯು ಪಾಲಿಕೆಯ ಮೂಲ ಜವಾಬ್ದಾರಿಯಾಗಿರುತ್ತದೆ. ಅದರಂತೆ, 2021 ರಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿಯನ್ನು (BSWML) ರಚಿಸಿ ಅದರ ಮುಖಾಂತರ ಇಡೀ ಘನತ್ಯಾಜ್ಯ ನಿರ್ವಹಣೆ ಹಾಗೂ ಸಂಸ್ಕರಣಾ ಮೇಲ್ವಿಚಾರಣೆಯನ್ನು ಸದರಿ ಕಂಪನಿಗೆ ವಹಿಸಿ ರಾಜ್ಯ ಸರ್ಕಾರವು ಆದೇಶಿಸಿರುವುದು ಸರಿಯಷ್ಟೇ. ಇತ್ತೀಚೆಗೆ ಆಡಳಿತಾತ್ಮಕವಾಗಿ ಹಾಗೂ ಭೌತಿಕವಾಗಿ ಇನ್ನೂ ಸೃಷ್ಟಿಯಾಗದ 243 ವಾರ್ಡ್‌ಗಳಿಗೆ 89 ಪ್ಯಾಕೇಜ್‌ಗಳಾಗಿ ವಿಂಗಡಿಸಿ ಯಾವುದೇ ರೀತಿಯ ಶಾಸನಬದ್ಧ ಅಧಿಕಾರ ಇಲ್ಲದ BSWML ಮುಖಾಂತರ ಪಾಲಿಕೆಗೆ ಇರುವ ಅಧಿಕಾರವನ್ನು ಸದರಿ ಕಂಪನಿಗೆ ಬಿಬಿಎಂಪಿ ಕಾಯ್ದೆ ಕಲಂ.285 ಮತ್ತು ಸಂವಿಧಾನ ಅನುಚ್ಛೇದ 243W ಹಾಗೂ ಷಡ್ಯೂಲ್ 12ನ್ನು ಉಲ್ಲಂಘಿಸಿರುವುದರ ಜೊತೆಗೆ ಪಾಲಿಕೆಯಿಂದ ಕಳೆದ ಮೂರು ವರ್ಷಗಳ ಹಿಂದೆ ನೀಡಿದ್ದ 50 ಘನತ್ಯಾಜ್ಯ ಟ್ರಾನ್ಸ್‌ಫರ್ ಸ್ಟೇಷನ್ ಪ್ರತಿ ಘಟಕ 25 ಮೆಟ್ರಿಕ್ ಟನ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲು ಟಿ.ಪಿ.ಎಸ್ ಸಂಸ್ಥೆಗೆ ಯಾವುದೇ ಮುಂದಾಲೋಚನೆ ಇಲ್ಲದೆ ನೀಡಲಾಗಿತ್ತು. ಆದರೆ ಟಿ.ಪಿ.ಎಸ್. ಸಂಸ್ಥೆಯು ಕೇವಲ 10 ಕಡೆ ಮಾತ್ರ ಸ್ಥಾಪಿಸಿ ಯೋಜನೆಯನ್ನು ಸಂಪೂರ್ಣ ವಿಫಲಗೊಳಿಸಿದೆ. ಇಂತಹ ಸಂದರ್ಭದಲ್ಲಿ ಮತ್ತೆ ಪಾಲಿಕೆ ವ್ಯಾಪ್ತಿಯಲ್ಲಿ 3 ಘನತ್ಯಾಜ್ಯ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಲು, ಅಂದರೆ, 150 ಮೆಟ್ರಿಕ್ ಟನ್ ಸಾಮರ್ಥ್ಯದ ಪ್ರತಿ ಘಟಕಕ್ಕೆ 30 ಸಾವಿರ ಚದರ ಅಡಿ ನಿವೇಶನ ಹಾಗೂ ರೂ.13 ಕೋಟಿಯನ್ನು ಸ್ಥಾಪಿಸುವ ವೆಚ್ಚ ಮಾಡಿ ಹಾಗೂ ನಿರ್ವಹಣೆ ವೆಚ್ಚ ರೂ.9 ಕೋಟಿ ಪ್ರತಿ ಘಟಕಕ್ಕೆ ನೀಡುವ ಟೆಂಡರ್ ಆಧರಿಸಿ ಯಾವುದೇ ಬ್ಯಾಂಕ್ ಗ್ಯಾರೆಂಟಿ ಇಲ್ಲದೆ 3 ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಿ ನಿರ್ವಹಿಸಲು ಗುತ್ತಿಗೆದಾರರಿಗೆ ಕೆಲಸದ ಆದೇಶ ನೀಡಿರುವುದು ಟೆಂಡರ್ ಅಧಿಸೂಚನೆಯ ಉಲ್ಲಂಘನೆಯಾಗಿರುತ್ತದೆ. ಪಾಲಿಕೆಯಿಂದ ಯಾವುದೇ ಮುಂದಾಲೋಚನೆ ಹಾಗೂ ಸಮಗ್ರ ಯೋಜನೆ ಇಲ್ಲದೆ ನಗರದ ಇತರೆ ಇಲಾಖೆಗಳಿಂದ ಎನ್.ಓ.ಸಿ ಪಡೆಯದೆ ಹಾಗೂ ಸೂಕ್ತ ನಿವೇಶನಗಳನ್ನು ಗುರುತಿಸದೆ / ಖಾತ್ರಿ ಪಡಿಸಿಕೊಳ್ಳದೆ 3 ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಹೊರಟಿರುವುದು ಅಧಿಕಾರ ದುರುಪಯೋಗ ಸಾಬೀತಾಗಿರುತ್ತದೆ. ಪಾಲಿಕೆಯಿಂದ ಈಗ ಪ್ರತಿದಿನ ಸಂಸ್ಕರಣಾ ಘಟಕಗಳಿಗೆ ವಾರ್ಡ್‌ಗಳಿಂದ ಸಾಗಾಣೆ ವೆಚ್ಚ ಪ್ರತಿ ಟನ್‌ಗೆ ರೂ.620/- ನೀಡುತ್ತಿದೆ. ಆದರೆ ಪ್ರಸ್ತಾಪಿಸಿರುವ ಟ್ರಾನ್ಸ್‌ಫರ್ ಸ್ಟೇಷನ್ ಸಾಗಾಣಿಕೆ ವೆಚ್ಚವು ಪ್ರತಿ ದಿನ ಪ್ರತಿಟನ್‌ಗೆ ರೂ.1600/ಗಳು ಆಗುತ್ತಿರುವುದು ಸಾರ್ವಜನಿಕರ ಹಣ ದುರುಪಯೋಗ ಪಡಿಸಿಕೊಂಡಂತಾಗುತ್ತದೆ. ಸದರಿ ವಿಷಯದಲ್ಲಿ ಈಗಾಗಲೇ ಲೋಕಾಯುಕ್ತ ಸಂಸ್ಥೆಗೆ ಸಾರ್ವಜನಿಕರಿಂದ ದೂರನ್ನು ಸಹ ನೀಡಲಾಗಿರುತ್ತದೆ. ಇಂತಹ ಸನ್ನಿವೇಶದಲ್ಲಿ, ಪಾಲಿಕೆಯಿಂದ ಅವೈಜ್ಞಾನಿಕವಾಗಿ ಹಾಗೂ ದೂರದೃಷ್ಟಿಯಿಲ್ಲದೆ SWM ನಿಯಮ

2016 ಹಾಗೂ ಎನ್.ಜಿ.ಟಿ. ಆದೇಶಗಳಿಗೆ ಮಾನ್ಯತೆ ನೀಡದೆ ಸಾರ್ವಜನಿಕ ಹಣದ ದುರ್ಬಳಕೆಗೆ ಅವಕಾಶ ಕಲ್ಪಿಸಿದಂತಾಗುತ್ತದೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇವೆ.

---

**ಉತ್ತರ**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದ ಸುಮಾರು 714 ಚ.ಕಿ.ಮೀ ವಿಸ್ತೀರ್ಣ ಪ್ರದೇಶದಲ್ಲಿ ಕಾರ್ಯವ್ಯಾಪ್ತಿ ಹೊಂದಿದ್ದು, ಸದರಿ ಪ್ರದೇಶದಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಗಳ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ.

  ಆದರೆ, ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕಾಗಿ ಪಾಲಿಕೆ ಮತ್ತು ಸರ್ಕಾರದ ವತಿಯಿಂದ ಹಮ್ಮಿಕೊಳ್ಳಲಾದ ವಿವಿಧ ಯೋಜನೆಗಳನ್ನು ನಿರ್ದಿಷ್ಟ ಅವಧಿಯೊಳಗೆ ಅನುಷ್ಠಾನಗೊಳಿಸಲು ವಿಫಲವಾಗುತ್ತಿರುವುದರಿಂದ, ಸಾರ್ವಜನಿಕರಿಗೆ ಪದೇ ಪದೇ ಅನಾನುಕೂಲತೆಯಾಗುತ್ತಿರುತ್ತದೆ. ಆದ್ದರಿಂದ, ಘನತ್ಯಾಜ್ಯ ನಿರ್ವಹಣೆಗಾಗಿ ವೃತ್ತಿಪರವಾಗಿ ನಿರ್ವಹಿಸಲ್ಪಡುವ ಸರ್ಕಾರದ ಸ್ವಾಮ್ಯದ ನಿಯಮಿತ ಕಂಪನಿಯನ್ನು ಕಂಪನೀಸ್ ಕಾಯ್ದೆಯಡಿಯಲ್ಲಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಂಪನಿಯನ್ನು ಸರ್ಕಾರ ಆದೇಶ ಸಂಖ್ಯೆ: ನಅಇ 256 ಎಂಎನ್‌ವೈ 2020, ದಿನಾಂಕ: 05.03.2021 ರನ್ವಯ ಸ್ಥಾಪಿಸಲಾಗಿರುತ್ತದೆ ಹಾಗೂ ಕಂಪನೀಸ್ ಕಾಯ್ದೆಯಡಿಯಲ್ಲಿ ದಿನಾಂಕ 22.05.2021 ರಂದು ನೋಂದಾಯಿಸಲಾಗಿರುತ್ತದೆ. ಸದರಿ ಕಂಪನಿಯಲ್ಲಿ ಬಿಬಿಎಂಪಿಯ ಪಾಲು ಶೇ.51 ರಷ್ಟಿದ್ದು, ಇನ್ನುಳಿದ ಶೇ.49 ರಷ್ಟು ಪಾಲು ರಾಜ್ಯ ಸರ್ಕಾರದ್ದಾಗಿರುತ್ತದೆ.

- ಅದರಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಎಲ್ಲಾ ಮಾದರಿಯ ಘನತ್ಯಾಜ್ಯದ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ವೈಜ್ಞಾನಿಕವಾಗಿ ಮಾಡುವ ಜವಾಬ್ದಾರಿ ಹಾಗೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು ನೂತನವಾಗಿ ಸೃಜಿಸಲ್ಪಟ್ಟಿರುವ ಕಂಪನಿಯದ್ದಾಗಿರುತ್ತದೆ.

  ಉಳಿದಂತೆ, ಪಾಲಿಕೆ ವ್ಯಾಪ್ತಿಯ ರಸ್ತೆಗಳ ಸ್ವಚ್ಛತಾ ಕಾರ್ಯ ಒಳಗೊಂಡಂತೆ ರಸ್ತೆಗಳ ನೈರ್ಮಲ್ಯ ಕಾಪಾಡುವುದು ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

  ಇದಲ್ಲದೇ, ಈಗಾಗಲೇ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ (ಬಿ.ಎಸ್.ಡಬ್ಲ್ಯೂ.ಎಂ.ಎಲ್) ವತಿಯಿಂದ ಆಹ್ವಾನಿಸಲಾಗಿದ್ದ 89 ಪ್ಯಾಕೇಜ್‌ವಾರು ಕರೆದಿರುವ ಟೆಂಡರ್ ಕುರಿತಂತೆ ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 21876/2022 ಹಾಗೂ 22412/2022 ಗಳನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ದಿನಾಂಕ 21.11.2022 ರಂದು ವಜಾಗೊಳಿಸಲಾಗಿರುತ್ತದೆ.

- ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 66 ಬಿಬಿಎಸ್ 2022, ಬೆಂಗಳೂರು, ದಿನಾಂಕ: 23.06.2022 ರ ರೀತ್ಯಾ ಬಿಬಿಎಂಪಿಯಲ್ಲಿ 243 ವಾರ್ಡ್‌ಗಳನ್ನು ಸೃಜಿಸಿದ್ದು, ಪ್ರತಿ ವಾರ್ಡ್‌ಗಳ ಸಂಖ್ಯೆ, ಅವುಗಳ ಹೆಸರು ಹಾಗೂ ವಾರ್ಡ್ ವ್ಯಾಪ್ತಿಯ ಗಡಿಗಳ ಚಕ್ಕುಬಂಧಿಗಳ ವಿವರಗಳನ್ನೂ ಸಹ ಪ್ರಚುರ ಪಡಿಸಲಾಗಿರುತ್ತದೆ.

- ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಂಪನಿಯನ್ನು ಕಂಪನೀಸ್ ಕಾಯ್ದೆಯಡಿಯಲ್ಲಿ ಸ್ಥಾಪಿಸಿರುವುದರಿಂದ, ಕಂಪನೀಸ್ ಕಾಯ್ದೆಯನ್ವಯ ಸದರಿ ಕಂಪನಿಗೆ ಟೆಂಡರ್ ಆಹ್ವಾನಿಸುವ ಅಧಿಕಾರವಿರುತ್ತದೆ. ಅದರಂತೆ, ಸದರಿ ಕಂಪನಿಯಿಂದ ಪಾಲಿಕೆಯ ಎಲ್ಲಾ 243 ವಾರ್ಡ್‌ಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಸಂಗ್ರಹಿಸಿ, ಸಾಗಣಾಣಿಕೆ ಮಾಡಲು ಪ್ಯಾಕೇಜ್‌ವಾರು ಟೆಂಡರ್ ಆಹ್ವಾನಿಸಲಾಗಿರುತ್ತದೆ.

- ಪ್ರಸ್ತುತ ಬಿಬಿಎಂಪಿಯಲ್ಲಿ ಆಟೋಟಿಪ್ಪರ್ ವಾಹನಗಳ ಮೂಲಕ ಪಾಲಿಕೆ ವ್ಯಾಪ್ತಿಯ ಮನೆ-ಮನೆಗಳಿಂದ ಘನತ್ಯಾಜ್ಯವನ್ನು ಸಂಗ್ರಹಿಸಿ, ಸದರಿ ತ್ಯಾಜ್ಯವನ್ನು ಕಾಂಪ್ಯಾಕ್ಟರ್ ವಾಹನಗಳಿಗೆ ವರ್ಗಾಯಿಸಿ, ಕಾಂಪ್ಯಾಕ್ಟರ್ ವಾಹನಗಳ ಮೂಲಕ ಘನತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕಗಳಿಗೆ ಸಾಗಾಣಿಕೆ ಮಾಡಲಾಗುತ್ತಿದೆ. ಆಟೋಟಿಪ್ಪರ್ ವಾಹನಗಳಿಂದ ಘನತ್ಯಾಜ್ಯವನ್ನು ಕಾಂಪ್ಯಾಕ್ಟರ್ ವಾಹನಗಳಿಗೆ ವರ್ಗಾಯಿಸಲು ನಿರ್ದಿಷ್ಟ ಸ್ಥಳಗಳಿಲ್ಲದ ಕಾರಣ, ರಸ್ತೆ ಬದಿಗಳಲ್ಲಿ ಘನತ್ಯಾಜ್ಯವನ್ನು ವರ್ಗಾಯಿಸಲಾಗುತ್ತಿರುತ್ತದೆ. ಇದರಿಂದಾಗಿ, ರಸ್ತೆಗಳಲ್ಲಿ ಲೀಚೆಟ್ ದ್ರಾವಣವು ಸೋರಿ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೇ ಹಾಗೂ ನಗರ ನೈರ್ಮಲ್ಯವು ಹಾಳಾಗುತ್ತಿರುತ್ತದೆ. ಇದಲ್ಲದೇ, ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿರುತ್ತದೆ.

- ಸದರಿ ನ್ಯೂನ್ಯತೆಯನ್ನು ಸರಿಪಡಿಸಿ ಘನತ್ಯಾಜ್ಯ ನಿರ್ವಹಣೆ ನಿಯಮಾವಳಿ-2016 ರ ರೀತ್ಯಾ ದ್ವಿತೀಯ ಹಂತದ ಘನತ್ಯಾಜ್ಯ ಸಂಗ್ರಹಣೆಗಾಗಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಇದಲ್ಲದೇ, ಸದರಿ ಯೋಜನೆಗಳಿಗೆ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಯನ್ನೂ ಸಹ ಪಡೆಯಲಾಗಿರುತ್ತದೆ. ಈ ತರಹದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್‌ನಲ್ಲಿಯೂ ಸಹ ದೇಶದ ಎಲ್ಲಾ ಪ್ರಮುಖ ನಗರಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಾಣಿಕೆ ಹಾಗೂ ಸಂಸ್ಕರಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಸ್ಥಾಪಿಸಲು ಸಲಹೆಯನ್ನು ನೀಡಲಾಗಿರುತ್ತದೆ.

- ಅದರಂತೆ, ಮೊದಲನೇ ಹಂತದಲ್ಲಿ ಬೆಂಗಳೂರು ನಗರದ ವಿವಿಧ 50 ಆಯ್ದ ಸ್ಥಳಗಳಲ್ಲಿ ಸಣ್ಣ ಪ್ರಮಾಣದ Transfer stationಗಳನ್ನು ನಿರ್ಮಿಸಿ, 7 ವರ್ಷಗಳ ಅವಧಿಗೆ ನಿರ್ವಹಣೆ ಮಾಡಲು ದಿನಾಂಕ: 04.12.2017 ರಂದು e-procurement portal ನಲ್ಲಿ ಟೆಂಡರ್ ಆಹ್ವಾನಿಸಿ, ಯಶಸ್ವಿ ಬಿಡ್ಡುದಾರರಾದ M/s TPS Infrastructure Limited ಸಂಸ್ಥೆಯವರಿಗೆ ದಿನಾಂಕ: 03-03-2019 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಸಂಸ್ಥೆಯವರು ಪಾಲಿಕೆಯ ವಿವಿಧ 50 ವಾರ್ಡ್‌ಗಳಲ್ಲಿ

ಟ್ರಾನ್ಸ್‌ಫರ್ ಸ್ಟೇಷನ್ ನಿರ್ಮಾಣ ಮಾಡಬೇಕಾಗಿದ್ದು, ಪಾಲಿಕೆ ವತಿಯಿಂದ ಸ್ಥಳಗಳನ್ನು ಗುರುತಿಸಿ ಹಸ್ತಾಂತರಿಸಿದ ದಿನಾಂಕದಿಂದ 120 ದಿನಗಳೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

- ಪ್ರಸ್ತುತ, M/s TPS Infrastructure Limited ಸಂಸ್ಥೆಯವರು ಈಗಾಗಲೇ 18 ಸ್ಥಳಗಳಲ್ಲಿ (ವಾರ್ಡ್ ಸಂಖ್ಯೆ: 118, 112, 73, 130, 197, 18, 42, 12, 44, 94, 58, 151, 90, 11, 196, 194, 192 & 56) ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಿದ್ದು, 7 ಸ್ಥಳಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ನೂತನ ತಾಂತ್ರಿಕತೆ ಹೊಂದಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಾರ್ವಜನಿಕರ ವಿರೋಧದಿಂದಾಗಿ ಪಾಲಿಕೆ ವತಿಯಿಂದ ಸ್ಥಳಗಳನ್ನು ಗುರುತಿಸಿ, ಸದರಿ ಸಂಸ್ಥೆಯವರಿಗೆ ಹಸ್ತಾಂತರಿಸಲು ಹಲವು ಕಡೆ ಸಾಧ್ಯವಾಗಿರುವುದಿಲ್ಲ. ಈಗಾಗಲೇ ಸ್ಥಾಪಿಸಲಾಗಿರುವ ಸ್ಥಳಗಳಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿರುತ್ತದೆ ಹಾಗೂ ಕಾಂಪ್ಯಾಕ್ಟರ್ ವಾಹನಗಳ ಸಂಖ್ಯೆಯು ಸದರಿ ವಾರ್ಡ್‌ಗಳಲ್ಲಿ ಕಡಿಮೆಯಾಗಿ ಘನತ್ಯಾಜ್ಯ ಸಾಗಾಣಿಕೆ ವೆಚ್ಚದಲ್ಲಿ ಉಳಿತಾಯವಾಗಿರುತ್ತದೆ. ಸದರಿ ಯೋಜನೆಯು ವಿಫಲವಾಗಿರುವುದಿಲ್ಲ.

- ಸಣ್ಣ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲು ಸ್ಥಳದ ಭಾದತೆ ಬಂದಿರುವುದರಿಂದ ಹಾಗೂ ಸದರಿ ಸ್ಟೇಷನ್‌ಗಳಿಂದ ಘನತ್ಯಾಜ್ಯ ಸಾಗಾಣಿಕೆ ವೆಚ್ಚದಲ್ಲಿ ಉಳಿತಾಯವಾಗುತ್ತಿರುವುದರಿಂದ, ಪ್ರತಿದಿನ 150 ಮೆ.ಟನ್ ಘನತ್ಯಾಜ್ಯವನ್ನು ಸಂಗ್ರಹಿಸಿ ಸಾಗಾಣಿಕೆ ಮಾಡುವ ಸಾಮರ್ಥ್ಯವುಳ್ಳ ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲು ಶುಭ್ರ ಬೆಂಗಳೂರು ಯೋಜನೆಯಡಿಯಲ್ಲಿ ಉದ್ದೇಶಿಸಲಾಗಿದೆ. ಈಗಾಗಲೇ 3 ವಿಧಾನಸಭಾ ಕ್ಷೇತ್ರಗಳಾದ ಮಹದೇವಪುರ, ಚಿಕ್ಕಪೇಟೆ ಹಾಗೂ ಬಿ.ಟಿ.ಎಂ ಲೇಔಟ್ ಗಳಲ್ಲಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲು ಸ್ಥಳಗಳನ್ನು ಗುರುತಿಸಲಾಗಿರುತ್ತದೆ ಹಾಗೂ ಎರಡು ಸ್ಥಳಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

- ಪ್ರತಿ ಸ್ಥಳಗಳಲ್ಲಿ ಆಯಾ ವಿಧಾನಸಭಾ ಕ್ಷೇತ್ರದ ಹಾಗೂ ಅದಕ್ಕೆ ಹೊಂದಿಕೊಂಡಿರುವ ಪಕ್ಕದ ವಾರ್ಡ್‌ಗಳಲ್ಲಿನ ದ್ವಿತೀಯ ಹಂತದ ಘನತ್ಯಾಜ್ಯ ಸಂಗ್ರಹಣೆಯನ್ನು ಈ Transfer Station ನಿಂದ ನಿರ್ವಹಿಸಲು ಉದ್ದೇಶಿಸಲಾಗಿರುತ್ತದೆ. ಸದರಿ ಯೋಜನೆಗೆ ದಿನಾಂಕ:13.10.2021ರಂದು e-procurement portal ನಲ್ಲಿ ಟೆಂಡರ್ ಆಹ್ವಾನಿಸಿ, ಸರ್ಕಾರದಿಂದ ಅನುಮೋದನೆಯನ್ನು ಪಡೆದು ಯಶಸ್ವಿ ಬಿಡ್ಡುದಾರರಾದ M/s Parishudh Ventures along with JV Partner M/s HYVA India Private Ltd., ಸಂಸ್ಥೆಯವರಿಂದ ಸೂಕ್ತ Performance Security ಅನ್ನು ಬ್ಯಾಂಕ್ ಗ್ಯಾರಂಟಿ ಮುಖಾಂತರ ಪಡೆದು ದಿನಾಂಕ: 24.08.2022 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

- ಪ್ರಸ್ತುತ ವಾರ್ಡ್‌ಗಳಿಂದ ಘನತ್ಯಾಜ್ಯದ ದ್ವಿತೀಯ ಹಂತದ ಸಾಗಾಣಿಕೆಗಾಗಿ ಪ್ರತಿ ಟನ್‌ಗೆ ಸರಾಸರಿ ರೂ.1042/- ಗಳನ್ನು ಪಾವತಿಸಲಾಗುತ್ತಿರುತ್ತದೆ. ಆದರೆ, ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ನಿಂದಾಗಿ ಘನತ್ಯಾಜ್ಯ ಸಾಗಾಣಿಕೆಗಾಗಿ ಪ್ರತಿ ಟನ್‌ಗೆ ಸರಾಸರಿ ರೂ.1029/- ಗಳೆಂದು ಅಂದಾಜಿಸಲಾಗಿರುತ್ತದೆ. ಇದಲ್ಲದೇ ರಸ್ತೆಗಳಲ್ಲಿ ಲೀಚೆಟ್ ಸೋರುವಿಕೆ, ಕಾಂಪ್ಯಾಕ್ಟರ್ ವಾಹನಗಳ

. . 5/-

ಸಂಖ್ಯೆಯಲ್ಲಿ ಉಳಿತಾಯ (ಇದರಿಂದ ಸಾಗಾಣಿಕೆ ವೆಚ್ಚದಲ್ಲಿ ಉಳಿತಾಯ), ಘನತ್ಯಾಜ್ಯದ ಸಂಗ್ರಹಣೆ, ಸಾಗಾಣಿಕೆ ಮತ್ತು ಸಂಸ್ಕರಣೆಯಲ್ಲಿ (Collection, Transportation and Processing) ಹೊಣೆಗಾರಿಕೆ (Accountability) ತರಲಾಗುವುದು.

- ದೊಡ್ಡ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್ ಯೋಜನೆಗೆ (150 MT ಟ್ರಾನ್ಸ್‌ಫರ್ ಸ್ಟೇಷನ್) ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತ ಸಂಸ್ಥೆಯಲ್ಲಿ ಸಾರ್ವಜನಿಕರಿಂದ ದಾಖಲಾಗಿರುವ ದೂರಿಗೆ ಕಾನೂನು ರೀತ್ಯಾ ಬಿ.ಬಿ.ಎಂ.ಪಿ. ವತಿಯಿಂದ ಸೂಕ್ತ ಪೂರಕ ದಾಖಲೆಗಳೊಂದಿಗೆ ಪ್ರತಿಯುತ್ತರ / ಸಮಜಾಯಿಷಿಯನ್ನು ನೀಡಲಾಗುವುದು.
- ಪೌರಘನತ್ಯಾಜ್ಯ ನಿರ್ವಹಣೆ ನಿಯಮಾವಳಿ –2000, ಘನತ್ಯಾಜ್ಯ ನಿರ್ವಹಣೆ–2016 ನಿಯಮಾವಳಿ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಮತ್ತು ಕರ್ನಾಟಕ ಉಚ್ಛ ನ್ಯಾಯಾಲಯವು ನೀಡಿರುವ ನಿರ್ದೇಶನಗಳಂತೆ ಕಾಲ ಕಾಲಕ್ಕೆ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹಾಲಿ ಇರುವ ಸಂಸ್ಕರಣಾ ಘಟಕಗಳು ಹಾಗೂ ಇತರೆ ಘನತ್ಯಾಜ್ಯ ನಿರ್ವಹಣೆ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಸೂಚಿಸಲಾಗಿರುತ್ತದೆ.

ಇದಲ್ಲದೇ, ದಿನಾಂಕ 14.09.2022 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದಿಂದ ನೇಮಿಸಲಾಗಿರುವ ರಾಜ್ಯ ಮಟ್ಟದ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳು ಮತ್ತು ಇತರೆ ಹಿರಿಯ ಪರಿಸರ ಅಧಿಕಾರಿಗಳು ಮಧ್ಯಪ್ರದೇಶದ ಇಂದೋರ್ ನಗರಕ್ಕೆ ಭೇಟಿ ನೀಡಿ, ಅದರಲ್ಲಿ "Establish adequate number of Transfer Stations with infrastructures like weighbridge, machinery for segregation, leachate collection and treatment, loading waste into a specially designed Capsules and Transportation vehicles at strategic locations in the city to ensure quantification of different types of wastes and to further segregation of already segregated waste at household level before it is transferred to processing facility" ಎಂದು ಸಲಹೆ ನೀಡಿರುತ್ತಾರೆ.

ಈ ಎಲ್ಲಾ ಮೇಲಿನ ವಿವರಗಳಂತೆ, ಬಿಬಿಎಂಪಿ ವತಿಯಿಂದ ಕೈಗೊಳ್ಳಲಾಗಿರುವ ಮೇಲ್ಕಂಡ ಯೋಜನೆಗಳ ಅನುಷ್ಠಾನದಿಂದ ಸಾರ್ವಜನಿಕರ ಹಣ ಉಳಿತಾಯವಾಗುವುದೇ ವಿನಃ ಯಾವುದೇ ರೀತಿಯಲ್ಲಿ ಹಣ ಪೋಲಾಗುವುದಿಲ್ಲ. ಈ ವ್ಯವಸ್ಥೆಯಿಂದ ಘನತ್ಯಾಜ್ಯ ನಿರ್ವಹಣೆಯಲ್ಲಿ ಶಿಸ್ತು ತರಲಾಗುತ್ತಿದ್ದು, ಹಣ ದುರ್ಬಳಕೆಯಾಗಲು ಅವಕಾಶವಿರುವುದಿಲ್ಲ.

---

**ಸಂಖ್ಯೆ: ನಅಇ 1014 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ